# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : **1463**
**ಸದಸ್ಯರ ಹೆಸರು** : **ಡಾ : ಉಮಾಶ್ರೀ (ನಾಮನಿರ್ದೇಶನ ಹೊಂದಿದವರು)**
**ಉತ್ತರಿಸಬೇಕಾದ ದಿನಾಂಕ** : **20.03.2025.**
**ಉತ್ತರಿಸುವ ಸಚಿವರು** : **ಗೃಹ ಸಚಿವರು**

| | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿರುವ ಕಾರಾಗೃಹಗಳ ಸಂಖ್ಯೆ ಎಷ್ಟು; ಪ್ರತಿ ಕಾರಾಗೃಹದಲ್ಲಿ ಎಷ್ಟು ಬ್ಯಾರಿಕ್‌ಗಳು ಇವೆ; ಈ ಎಲ್ಲಾ ಬ್ಯಾರಿಕ್‌ಗಳಲ್ಲೂ ಸಿ.ಸಿ.ಟಿ.ವಿ ಅಳವಡಿಸಲಾಗಿದೆಯೇ; (ಕಾರಾಗೃಹವಾರು ಅಳವಡಿಸಿರುವ ಸಿ.ಸಿ.ಟಿ.ವಿ ಅಳವಡಿಕೆ ಸಂಪೂರ್ಣವಾಗಿ ವಿವರ ನೀಡುವುದು) | ಕಾರಾಗೃಹ ಮತ್ತು ಸುಧಾರಣಾ ಸೇವೆ ಇಲಾಖೆಯಲ್ಲಿ 09 ಕೇಂದ್ರ ಕಾರಾಗೃಹಗಳು, 21 ಜಿಲ್ಲಾ ಕಾರಾಗೃಹಗಳು, 1 ಬಯಲು ಕಾರಾಗೃಹ, 23 ತಾಲ್ಲೂಕು ಕಾರಾಗೃಹಗಳು ಸೇರಿದಂತೆ ರಾಜ್ಯದಲ್ಲಿ ಒಟ್ಟು 54 ಕಾರಾಗೃಹಗಳಿರುತ್ತವೆ.<br>ಸದರಿ ಕಾರಾಗೃಹಗಳಲ್ಲಿರುವ ಬ್ಯಾರಕ್‌ಗಳ ಸಂಖ್ಯೆ, ಕಾರಾಗೃಹವಾರು ಅಳವಡಿಸಿರುವ ಸಿ.ಸಿ.ಟಿ.ವಿ ಅಳವಡಿಕೆ ವಿವರವನ್ನು ಅನುಬಂಧದಲ್ಲಿ ಒದಗಿಸಲಾಗಿದೆ. |
| ಆ | ಆ) ಸಿ.ಸಿ.ಟಿ.ವಿ ಇದ್ದಾಗ್ಯೂ ಜೈಲಿನ ಖೈದಿಗಳು ಅಕ್ರಮ ಚಟುವಟಿಕೆಯಲ್ಲಿ ಭಾಗಿಯಾಗುತ್ತಿರುವುದಾಗಿ ತಿಳಿದು ಬಂದಿದ್ದು ಇದು ಸರ್ಕಾರದ ಗಮನದಲ್ಲಿಯೇ; | ರಾಜ್ಯದ ಎಲ್ಲಾ ಕಾರಾಗೃಹಗಳಲ್ಲಿ ಬಂದಿಗಳು ನಿಷೇಧಿತ ವಸ್ತುಗಳ ಬಳಕೆಯನ್ನು ಮಾಡದಂತೆ ಹಾಗೂ ಅಕ್ರಮ ಚಟುವಟಿಕೆಗಳಲ್ಲಿ ತೊಡಗದಂತೆ ತಡೆಗಟ್ಟುವ ನಿಟ್ಟಿನಲ್ಲಿ, ಈಗಾಗಲೇ ಅಗತ್ಯ ಕ್ರಮಗಳನ್ನು ತೆಗೆದುಕೊಂಡಿರುತ್ತದೆ. ಅದರ ವಿವರಗಳು ಈ ಕೆಳಕಂಡಂತಿರುತ್ತದೆ:-<br>- ಸರ್ಕಾರದ ಸುತ್ತೋಲೆ ಸಂಖ್ಯೆ:ಹೆಚ್‌ಡಿ 03 ಪಿಆರ್‌ಎ 2010, ದಿನಾಂಕ: 22.03.2010ರಲ್ಲಿ ರಾಜ್ಯದ ಎಲ್ಲಾ ಕಾರಾಗೃಹಗಳಲ್ಲಿ ನಿಷೇಧಿತ ವಸ್ತುಗಳ ಬಳಕೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಪೊಲೀಸ್ ಇಲಾಖೆಯ ವತಿಯಿಂದ ಅನಿರೀಕ್ಷಿತ ತಪಾಸಣೆಗಳನ್ನು ನಡೆಸಲು ಅಗತ್ಯ ನಿರ್ದೇಶನಗಳನ್ನು ನೀಡಲಾಗಿರುತ್ತದೆ. ಅದರನ್ವಯ, ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿರುತ್ತದೆ.<br>- ಸರ್ಕಾರದ ಅಧಿಸೂಚನೆ ಸಂಖ್ಯೆ: ಹೆಚ್‌ಡಿ 187 ಪಿಆರ್‌ಎ 2021, ದಿನಾಂಕ: 28.03.2022ರಲ್ಲಿ ಕಾರಾಗೃಹಗಳಲ್ಲಿ ಬಂದಿಗಳು ಮೊಬೈಲ್ ಫೋನ್‌ಗಳು, ಎಲೆಕ್ಟ್ರಾನಿಕ್ ಸಾಧನಗಳು ಮತ್ತು ನಿಷೇಧಿತ ವಸ್ತುಗಳ ಬಳಕೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ, ಸೂಕ್ತ ಕಾನೂನು ಕ್ರಮವನ್ನು ಜರುಗಿಸುವ ಸಂಬಂಧ, ಕರ್ನಾಟಕ ಕಾರಾಗೃಹಗಳ |

| | | |
|---|---|---|
| | | ನಿಯಮಗಳು-1974ರ ನಿಯಮ 42(3)ರಲ್ಲಿನ ನಿಷೇಧಿತ ವಸ್ತುಗಳ ಪಟ್ಟಿಗೆ (ಕರ್ನಾಟಕ ಕಾರಾಗೃಹ (ತಿದ್ದುಪಡಿ) ನಿಯಮಗಳು-2022) ರಂತೆ ಅವಶ್ಯಕ ತಿದ್ದುಪಡಿಯನ್ನು ಮಾಡಲಾಗಿರುತ್ತದೆ. ನಿಷೇಧಿತ ವಸ್ತುಗಳ ಪಟ್ಟಿಗೆ ಸದರಿ ವಸ್ತುಗಳನ್ನು ಸೇರ್ಪಡೆಗೊಳಿಸಿ ಆದೇಶ ಹೊರಡಿಸಲಾಗಿರುತ್ತದೆ. ಅದರನ್ವಯ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.<br><br>- ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 09 ಶಾಸನ 2022, ದಿನಾಂಕ: 05.04.2022ರಲ್ಲಿ ಕಾರಾಗೃಹಗಳಲ್ಲಿ ಬಂದಿಗಳು ಮೊಬೈಲ್ ಫೋನ್‌ಗಳು, ಎಲೆಕ್ಟ್ರಾನಿಕ್ ಸಾಧನಗಳು ಮತ್ತು ನಿಷೇಧಿತ ವಸ್ತುಗಳ ಬಳಕೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ, ಸೂಕ್ತ ಕಾನೂನು ಕ್ರಮವನ್ನು ಜರುಗಿಸುವ ಸಂಬಂಧ ಕರ್ನಾಟಕ ಬಂದೀಖಾನೆಗಳ ಅಧಿನಿಯಮ, 1963ರ ಕಲಂ 42ಕ್ಕೆ (ಕರ್ನಾಟಕ ಬಂದೀಖಾನೆಗಳ (ತಿದ್ದುಪಡಿ) ಅಧಿನಿಯಮ, 2022) ರಲ್ಲಿ, ಅವಶ್ಯಕ ತಿದ್ದುಪಡಿಯನ್ನು ಮಾಡಲಾಗಿರುತ್ತದೆ. ನಿಷೇಧಿತ ವಸ್ತುಗಳ ಬಳಕೆ ಮಾಡಿದಲ್ಲಿ ಮೂರು ವರ್ಷಗಳಿಗೆ ಕಡಿಮೆ ಇಲ್ಲದ ಆದರೆ ಐದು ವರ್ಷಗಳಿಗೆ ವಿಸ್ತರಿಸಬಹುದಾದ ಶಿಕ್ಷೆ ಮತ್ತು ದಂಡನೆಗೆ ಒಳಪಡಿಸಲಾಗುತ್ತಿದೆ. ಅದರನ್ವಯ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿರುತ್ತದೆ.<br><br>- ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 37 ಪಿಆರ್‌ಎ 2022, ದಿನಾಂಕ: 17.03.2022ರಲ್ಲಿ ರಾಜ್ಯದ ಕಾರಾಗೃಹಗಳಲ್ಲಿ ಮೊಬೈಲ್ ಫೋನ್‌ಗಳು ಮತ್ತು ಇತರೆ ಯಾವುದೇ ರೀತಿಯ ನಿಷೇಧಿತ ವಸ್ತುಗಳ ಕಳ್ಳ ಸಾಗಣಿಕೆಯನ್ನು ಮತ್ತು ಅಪರಾಧ ಚಟುವಟಿಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಸಂಬಂಧಪಟ್ಟ ಪೊಲೀಸ್ ಆಯುಕ್ತರು/ ಜಿಲ್ಲಾ ಪೊಲೀಸ್ ಅಧೀಕ್ಷಕರುಗಳು ಹಾಗೂ ಕಾರಾಗೃಹಗಳ ಮುಖ್ಯ ಅಧೀಕ್ಷಕರು / ಅಧೀಕ್ಷಕರುಗಳಿಗೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಅಗತ್ಯ ನಿರ್ದೇಶನಗಳನ್ನು ನೀಡಲಾಗಿರುತ್ತದೆ. ಅದರನ್ವಯ, ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿರುತ್ತದೆ.<br><br>- ಕಾರಾಗೃಹಗಳಲ್ಲಿ ನಿಷೇಧಿತ ವಸ್ತುಗಳು ಪ್ರವೇಶಿಸದಂತೆ ತಡೆಯಲು ನಿಗಧಿಪಡಿಸಿರುವ ನಿಯಂತ್ರಣ ಕ್ರಮಗಳನ್ನು ಕಟ್ಟು ನಿಟ್ಟಾಗಿ ಪಾಲಿಸದೇ ಅಂತಹ ವಸ್ತುಗಳ ಪ್ರವೇಶಕ್ಕೆ ಜವಾಬ್ದಾರರಾದ ಅಧಿಕಾರಿ / ಸಿಬ್ಬಂದಿಗಳ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲಾಗಿದ್ದು, 2012 ರಿಂದ 2024ರ ಅವಧಿಯಲ್ಲಿನ ಶಿಸ್ತು ಕ್ರಮ ಜರುಗಿಸಲಾದ ವಿವರ ಈ ಕೆಳಕಂಡಂತಿದೆ: |

| ವರ್ಷ | ಪ್ರಕರಣಗಳ ಸಂಖ್ಯೆ | ಕರ್ತವ್ಯ ಲೋಪವೆಸಗಿದ ಅಧಿಕಾರಿ/ ಸಿಬ್ಬಂದಿಗಳ ಸಂಖ್ಯೆ | ದೋಷ ಮುಕ್ತಗೊಂಡ ಅಧಿಕಾರಿ / ಸಿಬ್ಬಂದಿಗಳ ಸಂಖ್ಯೆ | ಶಿಸ್ತು ಕ್ರಮಕ್ಕೆ ಒಳಗಾದ ಅಧಿಕಾರಿ/ ಸಿಬ್ಬಂದಿಗಳ ಸಂಖ್ಯೆ | ವಿಚಾರಣೆ ಎದುರಿಸುತ್ತಿರುವ ಅಧಿಕಾರಿ / ಸಿಬ್ಬಂದಿಗಳ ಸಂಖ್ಯೆ |
|---|---|---|---|---|---|
| 2012 | 02 | 04 | 00 | 04 | - |
| 2013 | 04 | 07 | 02 | 05 | - |
| 2014 | 00 | 00 | 00 | 00 | - |
| 2015 | 00 | 00 | 00 | 00 | - |
| 2016 | 04 | 21 | 00 | 21 | - |
| 2017 | 02 | 02 | 02 | 00 | - |
| 2018 | 01 | 01 | 00 | 01 | - |
| 2019 | 01 | 01 | 00 | 01 | - |
| 2020 | 02 | 02 | 01 | 01 | - |
| 2021 | 06 | 42 | - | 42 | - |
| 2022 | 08 | 78 | - | 16 | 62 |
| 2023 | 04 | 28 | - | 02 | 26 |
| 2024 | 24 | 126 | - | - | 126 |
| **ಒಟ್ಟು** | **58** | **312** | **5** | **93** | **214** |

- ಶಿಸ್ತು ಕ್ರಮಕ್ಕೆ ಒಳಗಾದ / ವಿಚಾರಣೆ ಎದುರಿಸುತ್ತಿರುವ 312 ಅಧಿಕಾರಿ/ ಸಿಬ್ಬಂದಿಗಳ ಪೈಕಿ 93 ಅಧಿಕಾರಿ/ ಸಿಬ್ಬಂದಿಗಳಿಗೆ ಈಗಾಗಲೇ ದಂಡನೆ ವಿಧಿಸಲಾಗಿದ್ದು, ಈ ಪೈಕಿ 02 ಸಿಬ್ಬಂದಿಗಳನ್ನು ಸೇವೆಯಿಂದ ಬಿಡುಗಡೆಗೊಳಿಸಲಾಗಿದೆ.

- ಕಾರಾಗೃಹಗಳಲ್ಲಿ ನಿಷೇಧಿತ ವಸ್ತುಗಳ ಪ್ರವೇಶಿಸದಂತೆ ತಡೆಯಲು ಜವಾಬ್ದಾರರಾದ ಅಧಿಕಾರಿ / ಸಿಬ್ಬಂದಿಗಳ ವಿರುದ್ಧ ಪ್ರಕರಣ ದಾಖಲಾಗಿದ್ದು ವಿವರ ಈ ಕೆಳಕಂಡಂತಿದೆ:

| ವರ್ಷ | ಪ್ರಕರಣಗಳ ಸಂಖ್ಯೆ | ಕರ್ತವ್ಯ ಲೋಪವೆಸಗಿದ ಅಧಿಕಾರಿ/ ಸಿಬ್ಬಂದಿಗಳ ಸಂಖ್ಯೆ | ದೋಷ ಮುಕ್ತಗೊಂಡ ಅಧಿಕಾರಿ/ ಸಿಬ್ಬಂದಿಗಳ ಸಂಖ್ಯೆ | ಶಿಸ್ತು ಕ್ರಮಕ್ಕೆ ಒಳಗಾದ ಅಧಿಕಾರಿ/ ಸಿಬ್ಬಂದಿಗಳ ಸಂಖ್ಯೆ | ವಿಚಾರಣೆ ಎದುರಿಸುತ್ತಿರುವ ಅಧಿಕಾರಿ/ ಸಿಬ್ಬಂದಿಗಳ ಸಂಖ್ಯೆ |
|---|---|---|---|---|---|
| 2023 | 03 | 03 | - | - | 03 |
| 2024 | 05 | 18 | - | - | 18 |
| 2025 | 01 | 01 | - | - | 01 |
| **ಒಟ್ಟು** | **09** | **22** | **-** | **-** | **22** |

| | | |
|---|---|---|
| | | - ಕಾರಾಗೃಹಗಳಲ್ಲಿ ಬಂದಿಗಳ ತಪಾಸಣೆ ಸಮಯದಲ್ಲಿ ಮೊಬೈಲ್ ಮತ್ತು ಇನ್ನಿತರ ನಿಷೇಧಿತ ವಸ್ತುಗಳು ಕಂಡುಬಂದಲ್ಲಿ ಅಂತಹವರ ವಿರುದ್ಧ ಕರ್ನಾಟಕ ಬಂದೀಖಾನೆಗಳ (ತಿದ್ದುಪಡಿ) ಅಧಿನಿಯಮ, 2022 ಕಲಂ 42 ರನ್ವಯ ಕ್ರಮವಹಿಸಲಾಗುತ್ತಿದೆ. ಈಗಾಗಲೇ ಅಂತಹವರ ವಿರುದ್ಧ ದಿನಾಂಕ: 05.04.2022 ರಿಂದ ದಿನಾಂಕ: 15.03.2025 ರವರೆಗೆ ಒಟ್ಟು 251 ಪ್ರಕರಣಗಳನ್ನು ಸಂಬಂಧಪಟ್ಟ ಪೊಲೀಸ್ ಠಾಣೆಗಳಲ್ಲಿ ದಾಖಲಿಸಲಾಗಿರುತ್ತದೆ. |
| ಇ | ಇ) ಹಾಗಿದ್ದಲ್ಲಿ, ಇನ್ನೂ ಹೆಚ್ಚಿನ ರೀತಿಯಲ್ಲಿ ತಂತ್ರಜ್ಞಾನ ಬಳಸಿ ಇದನ್ನು ನಿಯಂತ್ರಿಸಲು ಸಾಧ್ಯವಾಗುವುದರಿಂದ ಈ ರೀತಿಯ ಪ್ರಯತ್ನ ಮಾಡಲಾಗುವುದೆ? | - ಪ್ರಸ್ತುತ ರಾಜ್ಯದ ವಿವಿಧ ಕಾರಾಗೃಹಗಳಿಗೆ 1758 ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಸಲಾಗಿದ್ದು, ತುರ್ತಾಗಿ ಅಗತ್ಯವಿರುವ 1067 ಸಿಸಿಟಿವಿ ಕ್ಯಾಮರಾಗಳ ಅಳವಡಿಕೆಗೆ 2025-26ನೇ ಸಾಲಿನಲ್ಲಿ ಆಯವ್ಯಯದಲ್ಲಿ ಪ್ರಸ್ತಾವನೆ ಸಲ್ಲಿಸಲಾಗಿದೆ.<br><br>- ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ ಅಳವಡಿಸಿರುವ 280 ಸಂಖ್ಯೆ ಸಿಸಿಟಿವಿ ಕ್ಯಾಮರಾಗಳಿಗೆ ಅತ್ಯಾಧುನಿಕ AI-Powered Audio-Video Analytics System ಕಣ್ಗಾವಲು ವ್ಯವಸ್ಥೆಯನ್ನು 2025ನೇ ಫೆಬ್ರುವರಿ ಮಾಹೆಯಲ್ಲಿ ಅಳವಡಿಸಲಾಗಿದೆ.<br><br>- ಕೇಂದ್ರ ಸರ್ಕಾರದ "ಕಾರಾಗೃಹ ಆಧುನೀಕರಣ ಯೋಜನೆಯಡಿ" ಭದ್ರತೆ ಮತ್ತು ತಪಾಸಣೆಗಾಗಿ 09 ಸಂಖ್ಯೆ X-ray Baggage Scanner ಮತ್ತು ಸಂವಹನ ಸಲುವಾಗಿ 350 ಸಂಖ್ಯೆ Walkie Talkie ಗಳನ್ನು ಖರೀದಿಸಲು ಕ್ರಮವಹಿಸಲಾಗಿದ್ದು, ಕಾರಾಗೃಹಗಳಿಗೆ ಸರಬರಾಜು ಪ್ರಕ್ರಿಯೆ ಚಾಲನೆಯಲ್ಲಿದೆ.<br><br>- ಬೆಂಗಳೂರು ಕಾರಾಗೃಹದಲ್ಲಿ ಮೊಬೈಲ್ ಫೋನ್ ಬಳಸುವುದನ್ನು ತಡೆಯುವ ಸಲುವಾಗಿ 03 ಸಂಖ್ಯೆ T-HCBS ಸ್ಥಾವರಗಳನ್ನು ಅಳವಡಿಸಲಾಗಿರುತ್ತದೆ.<br><br>- ರಾಜ್ಯದ ಬೆಂಗಳೂರು, ಮೈಸೂರು, ಕಲಬುರ್ಗಿ, ಬೆಳಗಾವಿ, ಧಾರವಾಡ, ಬಳ್ಳಾರಿ ಮತ್ತು ಮಂಗಳೂರು ಕಾರಾಗೃಹಗಳಲ್ಲಿ ಅಳವಡಿಸಲಾಗಿರುವ 66 ಸಂಖ್ಯೆ ಮೊಬೈಲ್ ಜಾಮರ್ ಗಳನ್ನು ದುರಸ್ಥಿ ಮತ್ತು 2ಜಿ ಯಿಂದ 4ಜಿ/5ಜಿ ಗೆ ಮೇಲ್ದರ್ಜೇಗೇರಿಸಲು ಕ್ರಮ ಕೈಗೊಳ್ಳಲಾಗಿದ್ದು, ಈಗಾಗಲೇ ಬೆಂಗಳೂರು ಮತ್ತು ಬೆಳಗಾವಿ ಕೇಂದ್ರ ಕಾರಾಗೃಹಗಳಲ್ಲಿ ಜಾಮರ್‌ಗಳ ದುರಸ್ಥಿ ಮತ್ತು ಮೇಲ್ದರ್ಜೆಗೇರಿಸುವ ಕಾರ್ಯ ಮುಕ್ತಾಯಗೊಂಡಿದ್ದು, Testing and Recalibration ಹಂತದಲ್ಲಿರುತ್ತದೆ. ಕಾರಾಗೃಹದ ಒಳಭಾಗದಲ್ಲಿ ಯಾವುದೇ ನೆಟ್‌ವರ್ಕ್ ದೊರೆಯದಂತೆ ಹಾಗೂ ಕಾರಾಗೃಹದ ಹೊರಭಾಗದಲ್ಲಿ ಸಾರ್ವಜನಿಕರಿಗೆ ನೆಟ್‌ವರ್ಕ್ ತೊಂದರೆಯಾಗದಂತೆ ಅಗತ್ಯ ಕ್ರಮವಹಿಸುವಂತೆ M/s TCIL ಮತ್ತು DOT ರವರಿಗೆ ಸೂಚಿಸಲಾಗಿರುತ್ತದೆ. ಇನ್ನುಳಿದ ಕಾರಾಗೃಹಗಳಲ್ಲಿನ ಜಾಮರ್‌ಗಳ ದುರಸ್ಥಿ ಮತ್ತು ಮೇಲ್ದರ್ಜೆ ಕಾರ್ಯ ಪ್ರಗತಿಯಲ್ಲಿರುತ್ತದೆ. |

| | | |
|---|---|---|
| | | – ಬೆಂಗಳೂರು ಕೇಂದ್ರ ಕಾರಾಗೃಹಕ್ಕೆ ಮಾದಕ ವಸ್ತುಗಳನ್ನು (Narcotics) ಪತ್ತೆ ಹಚ್ಚಲು 02 ಸಂಖ್ಯೆ Belgian Malinois ತಳಿಯ ಶ್ವಾನಗಳನ್ನು ಖರೀದಿಸಿ ಅವುಗಳಿಗೆ ತರಬೇತಿ ನೀಡಿ ಶ್ವಾನದಳ ಸ್ಥಾಪಿಸಲಾಗಿರುತ್ತದೆ.<br><br>– ಭದ್ರತಾ ಉಪಕರಣಗಳಾದ Non Linear Junction Detector, Deep Search Metal Detector, HHMD, MESA, FG-1 Security Pole, DFMD, Body Worn Cameras, Drones and Walkie-Talkie ಗಳನ್ನು ಕಾರಾಗೃಹಗಳಲ್ಲಿ ಬಳಸಿ ತಪಾಸಣೆ ಕೈಗೊಳ್ಳಲಾಗುತ್ತಿದೆ.<br><br>– ಡ್ರೋನ್ ಕ್ಯಾಮರಾ ಉಪಕರಣಗಳನ್ನು ಖರೀದಿಸಿದ್ದು, ಬಂದಿಗಳ ಅಕ್ರಮ ಚಟುವಟಿಕೆಗಳನ್ನು ಪತ್ತೆ ಮಾಡಲು ಮತ್ತು ಚಲನ-ವಲನಗಳ ಮೇಲೆ ನಿಗಾವಣೆ ಮಾಡಲು ಕ್ರಮವಹಿಸಲಾಗುತ್ತಿದೆ.<br>ರಾಜ್ಯದ ವಿವಿಧ ಕಾರಾಗೃಹಗಳಿಗೆ 10 ಸಂಖ್ಯೆ Baggage Scanner ಹಾಗೂ 279 ಸಂಖ್ಯೆಯ Body Worn Camera ಮತ್ತು 37 Docking Station ಉಪಕರಣಗಳನ್ನು ಖರೀದಿಸಲಾಗಿದ್ದು, ಸರಬರಾಜು ಪ್ರಕ್ರಿಯೆ ಚಾಲನೆಯಲ್ಲಿದೆ. |

ಸಂಖ್ಯೆ: ಹೆಚ್‌ಡಿ 81 ಪಿಆರ್‌ಎ 2025

**(ಡಾ: ಜಿ. ಪರಮೇಶ್ವರ)**
ಗೃಹ ಸಚಿವರು

# ಅನುಬಂಧ

| ಕ್ರ.ಸಂ. | ಕಾರಾಗೃಹದ ಹೆಸರು | ಕಾರಾಗೃಹದಲ್ಲಿರುವ ಬ್ಯಾರಕ್/ಸೆಲ್‌ಗಳ ಸಂಖ್ಯೆ | ಎಲ್ಲಾ ಬ್ಯಾರಕ್‌ಗಳಲ್ಲಿಯೂ ಸಿಸಿಟಿವಿ ಅಳವಡಿಸಲಾಗಿದೆಯೇ? & ವಿವರ | ಪ್ರಸ್ತುತ ಇರುವ ಸಿಸಿಟಿವಿಗಳ ಸಂಖ್ಯೆ |
|---|---|---|---|---|
| 1 | ಕೇಂದ್ರ ಕಾರಾಗೃಹ ಬೆಂಗಳೂರು | 307 | ಇಲ್ಲ (ಬ್ಯಾರಕ್‌ಗಳ ಮುಂಭಾಗದಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿರುತ್ತದೆ) | 285 |
| 2 | ಬಯಲು ಕಾರಾಗೃಹ ದೇವನಹಳ್ಳಿ | 04 | - | 0 |
| 3 | ಜಿಲ್ಲಾ ಕಾರಾಗೃಹ ರಾಮನಗರ | 14 | ಇಲ್ಲ (ಬ್ಯಾರಕ್‌ಗಳ ಹೊರಭಾಗದಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿರುತ್ತದೆ) | 19 |
| 4 | ಜಿಲ್ಲಾ ಕಾರಾಗೃಹ ಕೋಲಾರ | 15 | ಇಲ್ಲ (ಕೆಲವು ಬ್ಯಾರಕ್‌ಗಳು ಮತ್ತು ಹೊರಭಾಗದಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿರುತ್ತದೆ) | 25 |
| 5 | ಉಪಕಾರಾಗೃಹ ಕೆ.ಜಿ.ಎಫ್. | 03 | (ಬ್ಯಾರಕ್‌ಗಳಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿರುತ್ತದೆ | 28 |
| 6 | ಜಿಲ್ಲಾ ಕಾರಾಗೃಹ ತುಮಕೂರು | 15 | ಇಲ್ಲ (ಬ್ಯಾರಕ್‌ಗಳ ಹೊರಭಾಗದಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿರುತ್ತದೆ) | 40 |
| 7 | ಜಿಲ್ಲಾ ಕಾರಾಗೃಹ ಚಿಕ್ಕಬಳ್ಳಾಪುರ | 15 | ಇಲ್ಲ (ಬ್ಯಾರಕ್‌ಗಳ ಹೊರಭಾಗದಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿರುತ್ತದೆ) | 21 |
| 8 | ತಾಲ್ಲೂಕು ಉಪಕಾರಾಗೃಹ ಚಿಂತಾಮಣಿ | 10 | ಇಲ್ಲ (ಬ್ಯಾರಕ್‌ಗಳ ಹೊರಭಾಗದಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿರುತ್ತದೆ) | 37 |
| 9 | ಕೇಂದ್ರ ಕಾರಾಗೃಹ ಮೈಸೂರು | 38 | ಇಲ್ಲ (ಬ್ಯಾರಕ್‌ಗಳ ಹೊರಭಾಗದಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿರುತ್ತದೆ) | 58 |
| 10 | ತಾಲ್ಲೂಕು ಉಪಕಾರಾಗೃಹ ಕೆ.ಆರ್.ನಗರ | 09 | ಇಲ್ಲ (ಬ್ಯಾರಕ್‌ಗಳ ಹೊರಭಾಗದಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿರುತ್ತದೆ) | 21 |
| 11 | ತಾಲ್ಲೂಕು ಉಪಕಾರಾಗೃಹ ನಂಜನಗೂಡು | 04 | ಇಲ್ಲ (ಬ್ಯಾರಕ್‌ಗಳ ಹೊರಭಾಗದಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿರುತ್ತದೆ) | 18 |
| 12 | ಜಿಲ್ಲಾ ಕಾರಾಗೃಹ ಚಾಮರಾಜನಗರ | 09 | ಇಲ್ಲ (ಬ್ಯಾರಕ್‌ಗಳ ಹೊರಭಾಗದಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿರುತ್ತದೆ) | 20 |

| | | | | |
|---|---|---|---|---|
| 13 | ಜಿಲ್ಲಾ ಕಾರಾಗೃಹ ಮಂಡ್ಯ | 23 | ಇಲ್ಲ (ಬ್ಯಾರಕ್‌ಗಳ ಹೊರಭಾಗದಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿರುತ್ತದೆ) | 30 |
| 14 | ಜಿಲ್ಲಾ ಕಾರಾಗೃಹ ಹಾಸನ | 11 | ಇಲ್ಲ (ಬ್ಯಾರಕ್‌ಗಳ ಹೊರಭಾಗದಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿರುತ್ತದೆ) | 22 |
| 15 | ತಾಲ್ಲೂಕು ಉಪಕಾರಾಗೃಹ ಸಕಲೇಶಪುರ | 06 | ಇಲ್ಲ (ಬ್ಯಾರಕ್‌ಗಳ ಹೊರಭಾಗದಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿರುತ್ತದೆ) | 14 |
| 16 | ಜಿಲ್ಲಾ ಕಾರಾಗೃಹ ಮಡಿಕೇರಿ | 10 | ಇಲ್ಲ (ಬ್ಯಾರಕ್‌ಗಳ ಹೊರಭಾಗದಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿರುತ್ತದೆ) | 18 |
| 17 | ಕೇಂದ್ರ ಕಾರಾಗೃಹ ಶಿವಮೊಗ್ಗ | 273 | ಇಲ್ಲ (ಸೆಲ್‌ಗಳ ಹೊರಭಾಗದಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿರುತ್ತದೆ) | 74 |
| 18 | ಮಹಿಳಾ ಕೇಂದ್ರ ಕಾರಾಗೃಹ ಶಿವಮೊಗ್ಗ | 08 | ಇಲ್ಲ (ಬ್ಯಾರಕ್‌ಗಳ ಹೊರಭಾಗದಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿರುತ್ತದೆ) | 22 |
| 19 | ಜಿಲ್ಲಾ ಕಾರಾಗೃಹ ಮಂಗಳೂರು | 30 | ಇಲ್ಲ (ಬ್ಯಾರಕ್‌ಗಳ ಹೊರಭಾಗದಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿರುತ್ತದೆ) | 60 |
| 20 | ಜಿಲ್ಲಾ ಕಾರಾಗೃಹ ಚಿಕ್ಕಮಗಳೂರು | 28 | ಇಲ್ಲ (ಬ್ಯಾರಕ್‌ಗಳ ಹೊರಭಾಗದಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿರುತ್ತದೆ) | 30 |
| 21 | ಜಿಲ್ಲಾ ಕಾರಾಗೃಹ ಉಡುಪಿ | 15 | ಇಲ್ಲ (ಬ್ಯಾರಕ್‌ಗಳ ಹೊರಭಾಗದಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿರುತ್ತದೆ) | 26 |
| 22 | ಜಿಲ್ಲಾ ಕಾರಾಗೃಹ ದಾವಣಗೆರೆ | 08 | ಇಲ್ಲ (ಬ್ಯಾರಕ್‌ಗಳ ಹೊರಭಾಗದಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿರುತ್ತದೆ) | 16 |
| 23 | ಜಿಲ್ಲಾ ಕಾರಾಗೃಹ ಚಿತ್ರದುರ್ಗ | 18 | ಇಲ್ಲ (ಬ್ಯಾರಕ್‌ಗಳ ಹೊರಭಾಗದಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿರುತ್ತದೆ) | 22 |
| 24 | ಕೇಂದ್ರ ಕಾರಾಗೃಹ ಬೆಳಗಾವಿ | 31 | ಇಲ್ಲ (ಬ್ಯಾರಕ್‌ಗಳ ಮುಂಭಾಗದಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿರುತ್ತದೆ) | 79 |
| 25 | ತಾಲ್ಲೂಕು ಉಪಕಾರಾಗೃಹ ಗೋಕಾಕ್ | 08 | ಇಲ್ಲ (ಬ್ಯಾರಕ್‌ಗಳ ಮುಂಭಾಗದಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿರುತ್ತದೆ) | 20 |
| 26 | ತಾಲ್ಲೂಕು ಉಪಕಾರಾಗೃಹ ಬೈಲಹೊಂಗಲ | 02 | ಇಲ್ಲ | 15 |

| | | | | |
|---|---|---|---|---|
| | | | (ಬ್ಯಾರಕ್‌ಗಳ ಮುಂಭಾಗದಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿರುತ್ತದೆ) | |
| 27 | ಜಿಲ್ಲಾ ಕಾರಾಗೃಹ ಕಾರವಾರ | 06 | ಇಲ್ಲ (ಬ್ಯಾರಕ್‌ಗಳ ಆವರಣದಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿರುತ್ತದೆ) | 21 |
| 28 | ತಾಲ್ಲೂಕು ಉಪಕಾರಾಗೃಹ ಹಳಿಯಾಳ | 04 | ಇಲ್ಲ (ಬ್ಯಾರಕ್‌ಗಳ ಆವರಣದಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿರುತ್ತದೆ) | 27 |
| 29 | ಕೇಂದ್ರ ಕಾರಾಗೃಹ ಧಾರವಾಡ | 14 | ಇಲ್ಲ (ಪ್ಯಾಸೇಜ್‌ಗಳಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿರುತ್ತದೆ) | 66 |
| 30 | ತಾಲ್ಲೂಕು ಉಪಕಾರಾಗೃಹ ಹುಬ್ಬಳ್ಳಿ | 13 | ಇಲ್ಲ (ಪ್ಯಾಸೇಜ್‌ಗಳಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿರುತ್ತದೆ) | 22 |
| 31 | ಜಿಲ್ಲಾ ಕಾರಾಗೃಹ ಹಾವೇರಿ | 05 | ಇಲ್ಲ (ಪ್ಯಾಸೇಜ್‌ಗಳಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿರುತ್ತದೆ) | 32 |
| 32 | ಜಿಲ್ಲಾ ಕಾರಾಗೃಹ ಗದಗ | 10 | ಇಲ್ಲ (ಪ್ಯಾಸೇಜ್‌ಗಳಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿರುತ್ತದೆ) | 27 |
| 33 | ಕೇಂದ್ರ ಕಾರಾಗೃಹ ವಿಜಯಪುರ | 30 | ಇಲ್ಲ (ಬ್ಯಾರಕ್‌ಗಳ ಮುಂಭಾಗ & ಆವರಣದಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿರುತ್ತದೆ) | 55 |
| 34 | ಜಿಲ್ಲಾ ಕಾರಾಗೃಹ ಬಾಗಲಕೋಟೆ | 09 | ಇಲ್ಲ (ಬ್ಯಾರಕ್‌ಗಳ ಮುಂಭಾಗ & ಆವರಣದಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿರುತ್ತದೆ) | 22 |
| 35 | ತಾಲ್ಲೂಕು ಉಪಕಾರಾಗೃಹ ಜಮಖಂಡಿ | 07 | ಇಲ್ಲ (ಬ್ಯಾರಕ್‌ಗಳ ಮುಂಭಾಗ & ಆವರಣದಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿರುತ್ತದೆ) | 35 |
| 36 | **ಕೇಂದ್ರ ಕಾರಾಗೃಹ ಕಲಬುರ್ಗಿ** | 18 | ಇಲ್ಲ (ಬ್ಯಾರಕ್‌ಗಳ ಮುಂಭಾಗ & ಹೊರ ಆವರಣದಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿರುತ್ತದೆ) | 65 |
| 37 | ಜಿಲ್ಲಾ ಕಾರಾಗೃಹ ಯಾದಗಿರಿ | 04 | ಇಲ್ಲ (ಬ್ಯಾರಕ್‌ಗಳ ಮುಂಭಾಗ & ಆಯಕಟ್ಟಿನ ಸ್ಥಳಗಳಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿರುತ್ತದೆ) | 9 |

| | | | | |
|---|---|---|---|---|
| 38 | ತಾಲ್ಲೂಕು ಉಪಕಾರಾಗೃಹ ಸುರಪುರ | 03 | ಇಲ್ಲ (ಬ್ಯಾರಕ್‌ಗಳ ಮುಂಭಾಗ & ಆಯಕಟ್ಟಿನ ಸ್ಥಳಗಳಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿರುತ್ತದೆ) | 13 |
| 39 | ಜಿಲ್ಲಾ ಕಾರಾಗೃಹ ಬೀದರ್ | 08 | ಇಲ್ಲ (ಬ್ಯಾರಕ್‌ಗಳ ಮುಂಭಾಗ & ಆಯಕಟ್ಟಿನ ಸ್ಥಳಗಳಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿರುತ್ತದೆ) | 24 |
| 40 | ತಾಲ್ಲೂಕು ಉಪಕಾರಾಗೃಹ ಔರಾದ್ | 05 | ಇಲ್ಲ (ಬ್ಯಾರಕ್‌ಗಳ ಮುಂಭಾಗ & ಆಯಕಟ್ಟಿನ ಸ್ಥಳಗಳಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿರುತ್ತದೆ) | 18 |
| 41 | ತಾಲ್ಲೂಕು ಉಪಕಾರಾಗೃಹ ಹುಮ್ನಾಬಾದ್ | 04 | ಇಲ್ಲ (ಬ್ಯಾರಕ್‌ಗಳ ಮುಂಭಾಗ & ಆಯಕಟ್ಟಿನ ಸ್ಥಳಗಳಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿರುತ್ತದೆ) | 24 |
| 42 | **ಕೇಂದ್ರ ಕಾರಾಗೃಹ ಬಳ್ಳಾರಿ** | 26 | ಇಲ್ಲ (ಬ್ಯಾರಕ್‌ಗಳ ಮುಂಭಾಗದಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿರುತ್ತದೆ) | 115 |
| 43 | ತಾಲ್ಲೂಕು ಉಪಕಾರಾಗೃಹ ಹೊಸಪೇಟೆ | 25 | ಇಲ್ಲ (ಸೆಲ್‌ಗಳ ಮುಂಭಾಗದಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿರುತ್ತದೆ) | 12 |
| 44 | ತಾಲ್ಲೂಕು ಉಪಕಾರಾಗೃಹ ಹರಪ್ಪನಹಳ್ಳಿ | 29 | ಇಲ್ಲ (ಸೆಲ್‌ಗಳ ಮುಂಭಾಗದಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿರುತ್ತದೆ) | 19 |
| 45 | ತಾಲ್ಲೂಕು ಉಪಕಾರಾಗೃಹ ಹೂವಿನ ಹಡಗಲಿ | 04 | ಇಲ್ಲ (ಬ್ಯಾರಕ್‌ಗಳ ಹೊರಭಾಗದಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿರುತ್ತದೆ) | 27 |
| 46 | ಜಿಲ್ಲಾ ಕಾರಾಗೃಹ ರಾಯಚೂರು | 15 | ಇಲ್ಲ (ಬ್ಯಾರಕ್‌ಗಳ ಹೊರಭಾಗದಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿರುತ್ತದೆ) | 19 |
| 47 | ತಾಲ್ಲೂಕು ಉಪಕಾರಾಗೃಹ ಲಿಂಗಸಗೂರು | 05 | ಇಲ್ಲ (ಬ್ಯಾರಕ್‌ಗಳ ಹೊರಭಾಗದಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿರುತ್ತದೆ) | 10 |
| 48 | ಜಿಲ್ಲಾ ಕಾರಾಗೃಹ ಕೊಪ್ಪಳ | 06 | ಇಲ್ಲ (ಬ್ಯಾರಕ್‌ಗಳ ಹೊರಭಾಗದಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿರುತ್ತದೆ) | 21 |
| 49 | ತಾಲ್ಲೂಕು ಉಪಕಾರಾಗೃಹ ಸೇಡಂ | 03 | ಇಲ್ಲ (ಬ್ಯಾರಕ್‌ಗಳ ಮುಂಭಾಗ & ಆಯಕಟ್ಟಿನ ಸ್ಥಳಗಳಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿರುತ್ತದೆ) | 8 |

| | | | | |
|---|---|---|---|---|
| 50 | ತಾಲ್ಲೂಕು ಉಪಕಾರಾಗೃಹ ಮಧುಗಿರಿ | 07 | ಇಲ್ಲ (ಬ್ಯಾರಕ್‌ಗಳ ಆವರಣದಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿರುತ್ತದೆ) | 15 |
| 51 | ತಾಲ್ಲೂಕು ಉಪಕಾರಾಗೃಹ, ತಿಪಟೂರು | 07 | ದುರಸ್ಥಿಗಾಗಿ ತಾತ್ಕಾಲಿಕವಾಗಿ ಮುಚ್ಚಲಾಗಿದೆ | 0 |
| 52 | ತಾಲ್ಲೂಕು ಉಪಕಾರಾಗೃಹ ಸಾಗರ | 04 | ದುರಸ್ಥಿಗಾಗಿ ತಾತ್ಕಾಲಿಕವಾಗಿ ಮುಚ್ಚಲಾಗಿದೆ | 16 |
| 53 | ತಾಲ್ಲೂಕು ಉಪಕಾರಾಗೃಹ ದೇವದುರ್ಗ | ದುರಸ್ಥಿಗಾಗಿ ತಾತ್ಕಾಲಿಕವಾಗಿ ಮುಚ್ಚಲಾಗಿದೆ | | 10 |
| 54 | ತಾಲ್ಲೂಕು ಉಪಕಾರಾಗೃಹ ಶಿರಸಿ | ದುರಸ್ಥಿಗಾಗಿ ತಾತ್ಕಾಲಿಕವಾಗಿ ಮುಚ್ಚಲಾಗಿದೆ | | 6 |
| | **ಒಟ್ಟು** | **1185** | – | **1758** |